ದಿನಾಂಕ : 06-06-2018 ಓ ಎಸ್ ನಂ. 240-2013

ಡಿ ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು : ಶ್ರೀ. ಆರ್.ಎಸ್.ಕೆ. ಪ್ರತಿವಾದಿ ಪರ ವಕೀಲರಿಂದ</u>

ನನಗೆ ದಾವಾದ ಆಸ್ತಿಯ ಸರ್ವೆ ನಂ. ಹೇಳಲು ಬರುತ್ತದೆ. ಅವುಗಳೆಂದರೆ 84/1 ಬ, 94, 15, 95 ಅಂತಾ ಇರುತ್ತವೆ. ಸರ್ವೆ ನಂ. 84 ರ ಒಟ್ಟು ಪೋಡಿಗಳು ಎಷ್ಟು ಇರುತ್ತವೆ ಮತ್ತು ಅದರ ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ಹಾಗೂ ಅದರ ಚಕಬಂದಿ ಹೇಳಲು ಆಗುವುದಿಲ್ಲ. ನಾನು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೋಡಿಲ್ಲ. ಸರ್ವೆ ನಂ. 84 ಇದು ಶಿವಪ್ಪ ಎಂಬುವವರ ಹೆಸರಿನಲ್ಲಿ ಖರೀದಿ ಆಗಿರುತ್ತದೆ. ಯಾವಾಗ ಖರೀದಿ ಆಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ನಾನು ಜನಿಸುವ ಪೂರ್ವದಲ್ಲಿಯೇ ಖರೀದಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 94 ಯಾವಾಗ ಖರೀದಿ ಆಗಿರುತ್ತದೆ ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 84, 94, 95 ಹಾಗೂ 15 ನಮ್ಮ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಇವುಗಳನ್ನು ಹೊರತುಪಡಿಸಿ ನಮ್ಮ ಹಿರಿಯರಿಂದ ಬಂದ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ಶಿವಪ್ಪ ಮತ್ತು ಬಸವಣ್ಣೆಪ್ಪ ಇವರು 1962 ವರೆಗೆ ಒಟ್ಟಾಗಿ ವಾಸವಾಗಿದ್ದರು. 1962 ರಲ್ಲಿ ನನ್ನ ವಯಸ್ಸು ಸುಮಾರು 6 ರಿಂದ 7 ವರ್ಷ ಇದ್ದಿರಬಹುದು. 1962 ರಲ್ಲಿ ನಮ್ಮ ತಂದೆ ಮತ್ತು ವಾದಿಯ ತಂದೆಯವರು ಒಟ್ಟಾಗಿ ಇದ್ದರು ಎಂದು ನಮ್ಮ ತಂದೆಯವರು ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ಯಾವ ವರ್ಷದಂದು ಈ ವಿಷಯವನ್ನು ನನಗೆ ತಿಳಿಸಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನಮ್ಮ ತಂದೆಯವರು ಹೇಳಿದ್ದರ ಆಧಾರದ ಮೇರೆಗೆ 1962 ರಲ್ಲಿ ಬೇರೆ ಆಗಿದ್ದೇವು ಎಂದು ನಾನು ಬರೆಸಿದ್ದೇನೆ. ನನ್ನ ಪ್ರತಿವಾದಪತ್ರದಲ್ಲಿ 1962 ರಲ್ಲಿ ಬೇರೆಯಾಗಿರುವ ವಿಷಯವನ್ನು ನಮ್ಮ ತಂದೆಯವರು ಹೇಳಿದ್ದರಿಂದ ನನಗೆ ಮಾಹಿತಿ ಗೊತ್ತಾಗಿರುತ್ತದೆ ಎಂದು ಹೇಳಿ ಬರೆಸಿಲ್ಲ. ನಮ್ಮ ತಂದೆ ಮತ್ತು ವಾದಿಯವರ ತಂದೆಯವರು ಬೇರೆ ಆಗಿದ್ದರು ಎಂಬುದಕ್ಕೆ ಸಂಬಂಧಿಸಿದಂತೆ ನನ್ನ ಸಮಕ್ಷಮ ಯಾವುದೇ ವಾಟ್ನಿ ಆಗಿಲ್ಲ. ನಮ್ಮ ತಂದೆಯವರು ಯಾವ ಯಾವ ಆಸ್ತಿಗಳು ಯಾರ ಯಾರ ಪಾಲಿಗೆ ಹೋಗಿರುತ್ತವೆ ಎಂದು ಹೇಳಿದ್ದರ ಮೇರೆಗೆ ನನಗೆ ಗೊತ್ತಾಗಿರುತ್ತದೆ.



ವಾದಿಯ ತಂದೆಯವರಿಗೆ ಸರ್ವೆ ನಂ. 95/2, 84/1 ಬ ಹೋಗಿರುತ್ತದೆ. 94/8+9 ಕ್ಷೇತ್ರ 2 ಎಕರೆ 19 ಗುಂಟೆ, 94/3 ಕ್ಷೇತ್ರ 1 ಎಕರೆ 23 ಗುಂಟೆ, 94/13 ಕ್ಷೇತ್ರ 11 ಗುಂಟೆ, 15/3 ಕ್ಷೇತ್ರ 4 ಎಕರೆ 12 ಗುಂಟೆ ನಮ್ಮ ತಂದೆಯವರಿಗೆ ಬಂದಿರುತ್ತವೆ. ಈಗ ಹೇಳಿದಂತೆ ಆದ ಹಿಸ್ಸೆದಂತೆ ನಮ್ಮ ಮತ್ತು ವಾದಿಯವರ ತಂದೆಯವರು ವಾಟ್ನಿ ಆಗಿದ್ದರ ಬಗ್ಗೆ ಕಂದಾಯ ಅಧಿಕಾರಿಗಳ ಬಳಿ ವರದಿ ನೀಡಿಲ್ಲ. 1962 ರಲ್ಲಿ ಈ ಪ್ರಕಾರ ವಾಟ್ನಿ ಆಗಿರುತ್ತದೆ ಎಂದು ಗ್ರಾಮಲೆಕ್ಕಾಧಿಕಾರಿಗಳು ಮತ್ತು ತಹಶೀಲ್ದಾರ ಇವರ ಕಡೆಯಿಂದ ಯಾವುದೇ ದಾಖಲೆಗಳನ್ನು ನೀಡಿಲ್ಲ. 1962 ರಲ್ಲಿ

ಈಗ ನಾನು ಹೇಳಿದಂತೆ ನಮ್ಮ ತಂದೆ ಮತ್ತು ವಾದಿ ತಂದೆಯವರ ಮಧ್ಯ ವಾಟ್ನಿ ಆಗಿದ್ದು ಆ ಪ್ರಕಾರ ನಮ್ಮ ಪಾಲಿಗೆ ಬಂದ ಜಮೀನುಗಳಲ್ಲಿ ಕಬ್ಜೆಯಲ್ಲಿ ಇರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸದರಿ ಆಸ್ತಿಗಳು ನಮ್ಮ ತಂದೆಯವರ ಪಾಲಿಗೆ ಬಂದಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1962 ರಲ್ಲಿ ನಮ್ಮ ತಂದೆ ಮತ್ತು ವಾದಿಯ ತಂದೆಯವರು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ ವಾದಿಯ ತಂದೆ ಮತ್ತು ನಮ್ಮ ತಂದೆಯವರ ನಡುವೆ ಸಾಮೂಹಿಕ ಸಾಗುವಳಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ 1962 ರಲ್ಲಿ ನಮ್ಮ ತಂದೆ ಮತ್ತು ವಾದಿಯ ತಂದೆಯವರ ನಡುವೆ ಯಾವುದೇ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ವಾದಿಯರ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಕೇವಲ ಸರ್ವೆ ನಂ. 94/3 ಕ್ಷೇತ್ರ 1 ಎಕರೆ 23 ಗುಂಟೆ, ಸರ್ವೆ ನಂ. 94/9 ಕ್ಷೇತ್ರ 1 ಎಕರೆ 16 ಗುಂಟೆ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಉಳಿದ ಆಸ್ತಿಗಳನ್ನು ಒಟ್ಟು ಕುಟುಂಬದಲ್ಲಿ ಇದ್ದಾಗ ಖರೀದಿಸಿದ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ.

ನಮ್ಮ ತಂದೆ ಮತ್ತು ವಾದಿಯರ ತಂದೆಯವರು 1940 ಕ್ಕಿಂತ ಪೂರ್ವದಲ್ಲಿಯೇ ಬೇರೇ ಬೇರೆ ಆಗಿದ್ದರು ಎಂದರೆ ಸರಿಯಲ್ಲ. 1940 ರಲ್ಲಿ ಬೇರೆ ಬೇರೆ ಆದ ನಂತರ ತಮ್ಮ ಪಾಲಿಗೆ ಬಂದ ಸರ್ವೆ ನಂ. 94/3 ಮತ್ತು ಸರ್ವೆ ನಂ. 94/9 ರಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಕಂದಾಯ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಬೇರೆ ಬೇರೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆಯವರು 1940 ರಲ್ಲಿ ಬೇರೆ ಆದ ನಂತರ ಸರ್ವೆ ನಂ. 84/1 ಬ ಕ್ಷೇತ್ರ 4 ಎಕರೆ 5 ಗುಂಟೆ ಜಮೀನನ್ನು 13-04-1959 ರಲ್ಲಿ ಸಿದ್ದಪ್ಪ ಕರೆಪ್ಪ ತಲ್ಲೂರ



ಎಂಬುವವರಿಂದ 2000/- ರೂ.ಗಳಿಗೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆಯವರು ತಮ್ಮ ಹೆಸರಿನಲ್ಲಿ ಸರ್ವೆ ನಂ. 84/1 ಬ ಜಮೀನನ್ನು ಖರೀದಿಸಿದ ನಂತರ ಮ್ಯುಟೇಷನ್ ನಂ. 3513 ರಲ್ಲಿ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯ ತಂದೆಯವರು ಖರೀದಿಸಿದ ಖರೀದಿ ಪತ್ರದಲ್ಲಿ ನಮ್ಮ ತಂದೆಯವರ ಹೆಸರು ಸಾಮೂಹಿಕದಲ್ಲಿ ದಾಖಲು ಇಲ್ಲ.. ಸರ್ವೆ ನಂ 84/1 ಬ ಜಮೀನಿನಲ್ಲಿ ನಮ್ಮ ತಂದೆಯವರ ಹೆಸರನ್ನು ಸಾಮೂಹಿಕವಾಗಿ ದಾಖಲು ಮಾಡಬೇಕೆಂದು ಅರ್ಜಿ ಕೊಟ್ಟಿಲ್ಲ. ವಾದಿಯ ತಂದೆಯವರ ಹೆಸರಿನಲಿ ಖರೀದಿ ಆಗಿದ್ದ ವಿಷಯ ನಮ್ಮ ತಂದೆಯವರಿಗೂ ಗೊತ್ತಿದ್ದು ಅವರು ಹೇಳಿದ್ದರಿಂದ ನಮಗೂ ಗೊತ್ತಾಗಿರುತ್ತದೆ. ನಮ್ಮ ತಂದೆಯವರು ಖರೀದಿ ವಿಷಯದ ಬಗ್ಗೆ ಹೇಳಿದ ನಂತರ ಸದರಿ ಆಸ್ತಿಗೆ ನಮ್ಮ ಹೆಸರನ್ನು ಸಹ ಸಾಮೂಹಿಕವಾಗಿ ದಾಖಲು ಮಾಡುವಂತೆ ನಾವು ಅರ್ಜಿ ಕೊಟ್ಟಿಲ್ಲ. ಸರ್ವೆ ನಂ. 84/1 ಬ ಇದು ವಾದಿಯವರ ತಂದೆಯವರ ಹೆಸರಿನಲ್ಲಿ ಮ್ಯುಟೇಷನ ನಂ. 3513 ರಲ್ಲಿ ದಾಖಲು ಆಗಿದ್ದನ್ನು ಕುರಿತು ನಾವು ಯಾವುದೇ ನ್ಯಾಯಾಲಯದಲ್ಲಿ

ದಾವೆ ಮಾಡಿಲ್ಲ. ನಮ್ಮ ತಂದೆಯವರಿಗೆ ವಾದಿಯ ತಂದೆಯವರು ಸರ್ವೆ ನಂ. 84/1 ಬ ಜಮೀನನ್ನು ಆತನ ಸ್ವಂತ ದುಡಿಮೆಯಿಂದ ಗಳಿಸಿದ್ದಾನೆ ಎಂದು ಗೊತ್ತಾಗಿದ್ದರಿಂದ ಅವರು ಅದನ್ನು ತಮ್ಮ ಜೀವಿತಾವಧಿಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 84/1 ಬ ಜಮೀನು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 95/2 ಕ್ಷೇತ್ರ 4 ಎಕರೆ ವಾದಿಯ ತಂದೆಯವರ ಹೆಸರಿನಲ್ಲಿ ಇರುತ್ತದೆ. ವಾದಿಯ ತಂದೆಯವರು ದಿ. 08.05.1950 ರಂದು ಕರೆಪ್ಪ ಮುಶಪ್ಪ ಶಿವನಾಯ್ಕರ ಎಂಬುವವರ ಕಡೆಯಿಂದ 3,000/- ರೂ. ಗಳಿಗೆ ತನ್ನ ಹೆಸರಿನಲ್ಲಿ ಖರೀದಿಸಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಟ್ಟುಕುಟುಂಬದಲ್ಲಿ ಇದ್ದಾಗ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಸದರಿ ಜಮೀನನ್ನು ಖರೀದಿಸಲು ವಾದಿಯ ತಂದೆಯವರಿಗೆ ಹಣ ನೀಡಿದ್ದರ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ. ಖರೀದಿ ಪತ್ರದಲ್ಲಿ ನಮ್ಮ ತಂದೆಯವರ ಹೆಸರು ಸಾಮಾಹಿಕ ಖರೀದಿದಾರ ಅಂತಾ ನಮೂದು ಇಲ್ಲ. ನಮ್ಮ ತಂದೆಯವರು ಸದರಿ ಆಸ್ತಿಯು ಸಾಮೂಹಿಕ ಆಸ್ತಿ ಇರುತ್ತದೆ ಎಂದು ತಮ್ಮ ಹೆಸರನ್ನು ಸಾಮೂಹಿಕದಾರ ಎಂದು ನಮೂದು ಮಾಡಲು ಅರ್ಜಿ ಕೊಟ್ಟಿಲ್ಲ. ವಾದಿಯ ತಂದೆಯ ಹೆಸರು ಮ್ಯುಟೇಷನ್ ಆಗಿದ್ದನ್ನು ಕುರಿತು ನಾವು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿಲ್ಲ. ಸದರಿ ಜಮೀನನ್ನು ಖರೀದಿಸುವಾಗ ನಮ್ಮ ತಂದೆ ಮತ್ತು ವಾದಿಯ ತಂದೆಯವರು ಒಟ್ಟಾಗಿ ಇರಲಿಲ್ಲ



ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿಸುವಾಗ ನಮ್ಮ ತಂದೆಯವರು ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ನಮ್ಮ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ನನಗಾಗಲೀ ನಮ್ಮ ತಂದೆಯವರಿಗಾಗಲೀ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.94/8 1 ಎಕರೆ 3 ಗುಂಟೆ ಜಮೀನು ದಿ. 27.04.1955 ರಂದು ಸೋಮಪ್ಪ ಶಿವಪ್ಪ ಸುಣದಕುಪ್ಪಿ ಇವರಿಂದ 700/- ರೂ.ಗಳಿಗೆ ವಾದಿಯ ತಂದೆಯವರ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲೂ ಸಹ ನಮ್ಮ ತಂದೆಯವರ ಹೆಸರು ಸಾಮೂಹಿಕ ಖರೀದಿದಾಗ ಅಂತಾ ನಮೂದು ಇಲ್ಲ ಸಾಕ್ಷಿ ಮುಂದುವರೆದು ಒಟ್ಟಾಗಿ ಇದ್ದಾಗ ಖರೀದಿಸಿದ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಖರೀದಿಸುವಾಗ ನಮ್ಮ ತಂದೆಯವರು ಹಣವನ್ನು ನೀಡಿದ್ದರ ಬಗ್ಗೆ ಯಾವುದೇ ದಾಖಲೆ ಇಲ್ಲ. ಸದರಿ ಜಮೀನು ವಾದಿಯ ತಂದೆಯವರ ಹೆಸರಿನಲ್ಲಿ ಖರೀದಿ ಆಗಿದ್ದರ ಬಗ್ಗೆ ಮ್ಯುಟೇಷನ್ ನಂ. 1201 ನೇದ್ದರಲ್ಲಿ ನಮೂದು ಆಗಿದೆ ಎಂದರೆ ಸರಿ. ಈ ಮ್ಯುಟೇಷನ್ ನ್ನು ಸಹ ನಮ್ಮ ತಂದೆಯವರು ಪ್ರಶ್ನಿಸಿಲ್ಲ. ಸದರಿ ಆಸ್ತಿಯನ್ನು ಸಹ ವಾದಿಯ ತಂದೆಯವರು ತಮ್ಮ ಸ್ವಂತ ಹಣದಿಂದ ಖರೀದಿಸಿದ್ದರಿಂದ ನಮ್ಮ ತಂದೆಯವರು ತಮ್ಮ ಜೀವಿತ ಅವಧಿಯಲ್ಲಿ ಅದನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಾನೂ ಸಹ ಇಲ್ಲಿಯವರೆಗೂ ಸದರಿ

ಮ್ಯುಟೇಷನನ್ನು ಪ್ರಶ್ನೆ ಮಾಡಿಲ್ಲ.

ಸರ್ವೆ ನಂ. 15/3 ಬ ಕ್ಷೇತ್ರ 4 ಎಕರೆ 12 ಗುಂಟೆ ಜಮೀನನ್ನು ದಿ. 01.09.1943 ರಂದು ವಾದಿಯ ತಂದೆಯವರು ಕಲ್ಲಪ್ಪ ಯಲ್ಲಪ್ಪ ಇಂಚಲ ಎಂಬುವವರಿಂದ 1200 ರೂ.ಗಳಿಗೆ ಖರೀದಿಸಿದ್ದಾರೆ ಎಂದರೆ ಸರಿ. ನಮ್ಮ ತಂದೆಯವರು ಹಣ ನೀಡಿದ್ದರ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ವಾದಿಯ ತಂದೆಯವರ ಹೆಸರಿನಲ್ಲಿ ಮ್ಯುಟೇಷನ ನಂ. 442 ರಂತೆ ದಾಖಲು ಆಗಿದೆ ಎಂದರೆ ಸರಿ. ನಮ್ಮ ತಂದೆಯವರು ಸದರಿ ಆಸ್ತಿಯು ಸಾಮೂಹಿಕ ಆಸ್ತಿ ಇರುತ್ತದೆ ಎಂದು ತಮ್ಮ ಹೆಸರನ್ನು ದಾಖಲು ಮಾಡುವಂತೆ ಯಾವುದೇ ಅರ್ಜಿ ಕೊಟ್ಟಿಲ್ಲ.

ನಮ್ಮ ತಂದೆಯವರು 1970 ರಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಮೃತಪಟ್ಟ ನಂತರ ಸದರಿ ಆಸ್ತಿಗಳು ಸಾಮೂಹಿಕ ಆಸ್ತಿಗಳ ಇರುತ್ತವೆ ಎಂದು ಹೆಸರು ದಾಖಲು ಮಾಡುವಂತೆ ನಾನು ಅರ್ಜಿ ಕೊಟ್ಟಿಲ್ಲ. ನಮ್ಮ ತಂದೆಯವರು ಮೃತಪಟ್ಟ ನಂತರ ಸದರಿ ಆಸ್ತಿಗಳು ಸಾಮೂಹಿಕ ಆಸ್ತಿಗಳು ಇದ್ದು,



ಸಾಮೂಹಿಕ ಕಬ್ಜಾದಲ್ಲಿ ಇರುತ್ತೇವೆ ಎಂದು ನಾವು ಯಾವುದೇ ನ್ಯಾಯಾಲಯದಲ್ಲಿ ಪಾಲು ದಾವೆ ಮಾಡಿಲ್ಲ.

ಮೊದಲ ಹಂತದ ಕಾಲಾವಧಿ ಮುಗಿದಿದ್ದರಿಂದ ಮತ್ತು ಮದ್ಯಾಹ್ನ 2 ಗಂಟೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

ಪುನಃ ಮದ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಿಂದ

ನಮ್ಮ ತಂದೆಯವರು ಮತ್ತು ವಾದಿಯ ತಂದೆಯವರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇಲ್ಲ. 1962 ನೇ ಇಸ್ವಿಗಿಂತ ಮೊದಲು ನಮ್ಮ ತಂದೆ ಮತ್ತು ವಾದಿಯ ತಂದೆಯವರು ಸಾಮೂಹಿಕವಾಗಿ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ನಮ್ಮ ತಂದೆಯವರು ಮತ್ತು ವಾದಿಯ ತಂದೆಯವರು ಬ್ಯಾಂಕಿನಲ್ಲಿ ಸಾಮೂಹಿಕವಾಗಿ ಯಾವುದೇ ಸಾಲವನ್ನು ಪಡೆದಿಲ್ಲ. ವಾದಿಯ ತಂದೆಯವರ ಹೆಸರಿನಲ್ಲಿ ಇರುವ ಸರ್ವೆ ನಂ. 84/1 ಬ, 95/2, 94/8 ಹಾಗೂ 15/3 ರಲ್ಲಿ ನಮ್ಮ ತಂದೆಯವರು ಬ್ಯಾಂಕಿನಲ್ಲಿ ಸಾಮೂಹಿಕವಾಗಿ ಸಾಲ ಪಡೆದಿಲ್ಲ. ಸರ್ವೆ ನಂ. 84/1 ಬ, 95/2, 94/8+1 ನೇದ್ದರಲ್ಲಿ ದೇವಲಾಪುರ ಗ್ರಾಮ ಸೇವಾ ಸಹಕಾರಿ ಸಂಘದಿಂದ 2,000/- ರೂ. ಸಾಲ ಪಡೆದಿದ್ದರ ಬಗ್ಗೆ ಹಕ್ಕು ದಾಖಲೆ ನಂ. 5103 ರಲ್ಲಿ ದಾಖಲಾಗಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ದಾವೆಗೆ ತಕರಾರು ಸಲ್ಲಿಸುವ ಸಮಯದಲ್ಲಿ ದಾವೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ತೆಗೆಸಿರುತ್ತೇನೆ. ನಾನು ತೆಗೆದ ದಾಖಲೆಗಳನ್ನು ನನಗೆ ಓದಲು ಬರದೇ ಇದ್ದುದ್ದರಿಂದ ಬೇರೆಯವರ ಕಡೆಯಿಂದ ಓದಿಸಿರುತ್ತೇನೆ. ನಾನು ದಾಖಲೆಗಳನ್ನು ನೋಡಿದಾಗ ವಾದಿಯ ತಂದೆಯವರು ಸಾಲ ಪಡೆದಿರುವ ವಿಷಯ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಪ್ರತಿವಾದ ಪತ್ರವನ್ನು ಸಲ್ಲಿಸುವ ಸಮಯದಲ್ಲಿ ಯಾವ ಇಸ್ವಿಯವರೆಗೆ ಕೂಡಿ ಇದ್ದೆವು ಎಂದು ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ. **1962** ರಲ್ಲಿ ನಾವು ಬೇರೆಯಾಗಿರುತ್ತೇವೆ ಎಂದು ಬರೆಸಿರುತ್ತೇನೆ. **1962** ರಲ್ಲಿ ಬೇರೆಯಾಗಿದ್ದೆವು ಎಂದು ಹೇಳಲು ಬೇರೆ ಸಾಕ್ಷಿದಾರರು ಇದ್ದರು, ಆದರೆ ಅವರು ಈಗ ಮೃತಪಟ್ಟಿರುತ್ತಾರೆ. **1962** ನೇ ಇಸ್ವಿಯಲ್ಲಿ ಯಾವ ದಿನದಂದು ಪಾಲು ಮಾಡಿದರು ಎಂದು ನನಗೆ ಗೊತ್ತಿಲ್ಲ.



ಬಸಪ್ಪ ಶಿವಪ್ಪ ಸುಣದಕುಪ್ಪಿ ನನ್ನ ಅಜ್ಜ ಇರುತ್ತಾರೆ. ನಮ್ಮ ಅಜ್ಜನವರಿಗೆ ನಮ್ಮ ತಂದೆ ಮತ್ತು ವಾದಿಯವರ ತಂದೆ ಮಾತ್ರ ಮಕ್ಕಳು ಎಂದರೆ ಸರಿ. ನಮ್ಮ ಅಜ್ಜನವರು ಮೃತಪಟ್ಟ ನಂತರ ನಮ್ಮ ತಂದೆ ಹಾಗೂ ವಾದಿಯ ತಂದೆಯವರು ಪಿತ್ರಾರ್ಜಿತವಾಗಿ ಬಂದ ಎರಡು ಜಮೀನುಗಳನ್ನು ತಮ್ಮಲ್ಲಿ ಅಪಸಾತ ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಪಸಾತ ವಾಟ್ನಿಯಲ್ಲಿ ವಾದಿಯ ತಂದೆಯವರಿಗೆ ಸರ್ವೆ ನಂ. **94/9** ಜಮೀನು ಹೋಗಿದ್ದು ಅವರ ಹೆಸರಿನಲ್ಲಿ ಮ್ಯುಟೇಷನ್ ನಂ. **1817** ರಲ್ಲಿ **1942** ರಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ಮ್ಯುಟೇಷನ ನಂ. **1817** ವಾದಿಯ ತಂದೆಯವರ ಹೆಸರಿನಲ್ಲಿ ದಾಖಲಾಗಿದ್ದನ್ನು ನಮ್ಮ ತಂದೆಯವರು ಪ್ರಶ್ನಿಸಿಲ್ಲ. ನಾನೂ ಸಹ ಸದರಿ ಮುಟೇಷನ್ ನ್ನು ಪ್ರಶ್ನಿಸಿಲ್ಲ. **1940** ರಲ್ಲಿಯೇ ನಮ್ಮ ತಂದೆ ಹಾಗೂ ವಾದಿಯ ತಂದೆಯವರು ಬೇರೆ ಬೇರೆ ಆಗಿದ್ದರಿಂದ ಆ ದಿನದಿಂದಲೇ ಅವಿಭಕ್ತ ಕುಟುಂಬ ಇಲ್ಲ ಎಂದರೆ ಸರಿಯಲ್ಲ. **1971** ರಲ್ಲಿ ಪುನಃ ವಾಟ್ನಿ ಆಯಿತು ಎಂದು ನನ್ನ ಪ್ರತಿವಾದಪತ್ರದಲ್ಲಿ ಬರೆಸಿಲ್ಲ. **1962** ರಿಂದ-**1997** ವರೆಗೆ ವಾದಿ ಮತ್ತು ಪ್ರತಿವಾದಿಯರು ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ನಮ್ಮ ತಂದೆಯವರು ವಾದಿಯ ತಂದೆಯ ವಿರುದ್ಧ ಸಮಾನ ಪಾಲು ಇದೆ ಎಂದು ಯಾವುದೇ ಹಿಸ್ಸಾ ದಾವೆಯನ್ನು ಮಾಡಿಲ್ಲ. **1962** ರಿಂದ **1997** ವರೆಗೆ ದಾವಾದ ಆಸ್ತಿಗಳನ್ನು ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ವಾದಿಯರು ದಾವಾದ ಆಸ್ತಿಗಳನ್ನು ವಾಟ್ನಿ ಮಾಡಿಕೊಡುವಂತೆ ನಮ್ಮನ್ನು ಕೇಳಿರುವುದಿಲ್ಲ. ವಾಟ್ನಿ ಪತ್ರವನ್ನು **2** ನೇ ಪ್ರತಿವಾದಿ ಬರೆಸಿರುತ್ತಾರೆ. ವಾಟ್ನಿ ಪತ್ರ ಬರೆಯಲು ಸ್ಟ್ಯಾಂಪ ನ್ನು ವಾದಿಯೇ ತಂದಿರುತ್ತಾರೆ. ದಿ. **28-07-1997** ರಂದು ಸ್ಟ್ಯಾಂಪ ತಂದು ಕೊಟ್ಟಿರುತ್ತಾನೆ. ಸ್ಟ್ಯಾಂಪನ್ನು ನೋಡಿದೇನೆ ಆದರೆ ಎಷ್ಟು ರೂಪಾಯಿಯ ಸ್ಟ್ಯಾಂಪ ಇದ್ದವು ಎಂದು ನೋಡಿಲ್ಲ. **11** ರಿಂದ **12** ಗಂಟೆ ಸಮಯದಲ್ಲಿ ಸ್ಟ್ಯಾಂಪ ತಂದಿದ್ದರು. ಸ್ಟ್ಯಾಂಪನಲ್ಲಿ ಮಹಾಂತೇಶ ಅಸ್ಟಗಿಮಠ ಎಂಬುವವರು ಬರೆದಿರುತ್ತಾರೆ. ಸ್ಟ್ಯಾಂಪನಲ್ಲಿ ಏನು ಬರೆದಿದ್ದಾರೆ ಎಂದು ಮಾಹಿತಿ ಇರುತ್ತದೆ. ಸರ್ವೆ ನಂ. **84/1** ಬ ಇದು ವಾದಿಗೆ ಹೋಗಿರುತ್ತದೆ. **95/2** **2** ನೇ ಪ್ರತಿವಾದಿಗೆ ಹೋಗಿರುತ್ತದೆ. ಸರ್ವೆ ನಂ. **94/3**, ಸರ್ವೆ ನಂ. **94/8+9**, **15/3**, **94/13** ನನ್ನ ಪಾಲಿಗೆ ಬಂದಿರುತ್ತದೆ. ಅವುಗಳ ಚಕಬಂದಿಗಳನ್ನು ವಾಟ್ನಿಯಲ್ಲಿ ಬರೆಸಿದ್ದೇವೆ. ಸದರಿ ವಾಟ್ನಿಯನ್ನು ನೊಂದಣಾಧಿಕಾರಿ ಕಚೇರಿಯಲ್ಲಿ ನೊಂದು ಮಾಡಿಸಿಲ್ಲ. ವಾದಿ

ಸ್ಟ್ಯಾಂಪನ್ನು ತಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸ್ಟಾಂಪ ಪೇಪರ ಮೇಲೆ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿಗೆ ಸರಿ ಬರದೇ ಇದ್ದುದ್ದರಿಂದ ನಾನು 2 ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ ವಾದಿಯ ಆಸ್ತಿಗಳನ್ನು ಕಬಳಿಸಬೇಕೆಂಬ ಉದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ತಯಾರಿಸಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಖೊಟ್ಟಿ ಸಹಿಯನ್ನು ಮಾಡಿಕೊಂಡು ಖೊಟ್ಟಿ ದಾಖಲೆ ತಯಾರಿಸಿದೇವೆ ಎಂದರೆ ಸರಿಯಲ್ಲ. ವಾದಿಯ ತಂದೆಯವರು ಗಳಿಸಿದ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇರದೇ ಇದ್ದರೂ ಸಹ ಕಂದಾಯ ಅಧಿಕಾರಿಯೊಂದಿಗೆ ಮಿಲಾಪಿಯಾಗಿ ಖೊಟ್ಟಿ ದಾಖಲೆಗಳನ್ನು ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಹಾಗೂ ಆತನ ಅಣ್ಣನ ನಡುವೆ ಜಗಳ ಹಚ್ಚಿ ವಾದಿಯ ವಿರುದ್ಧ ಕ್ರಿಮಿನಲ್ ಕೇಸನ್ನು ಸಹ ದಾಖಲು ಮಾಡಿಸಿದ್ದೆವು ಎಂದರೆ ಸರಿಯಲ್ಲ. ಮ್ಯುಟೇಷನ ನಂ. 8115 ನ್ನು ದಾಖಲಿಸುವ ಪೂರ್ವದಲ್ಲಿ ವಾದಿಗೆ ಯಾವುದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾಟ್ನಿ ಆಧಾರದ ಮೇರೆಗೆ ನನಗೆ ಯಾವುದೇ ಹಕ್ಕ ಅಧಿಕಾರಿ ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ಕಾನೂನುಬಾಹಿರವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರಿಂದ ವಾದಿಯು ನೋಟೀಸನ್ನು ನೀಡಿ ನಂತರ ಈ ದಾವೆಯನ್ನು ಮಾಡಿದ್ದಾನೆ ಎಂದರೆ ಸರಿಯಲ್ಲ. ದಿ. 25-10-1997 ರಂದು ವಾಟ್ನಿ ಆಗಿದೆ ಎಂದು ಹೇಳಲಾಗಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರು 1966 ರಲ್ಲಿ 2 ಎಕರೆ 13 ಗುಂಟೆ ಜಮೀನನ್ನು ಖರೀದಿಸಿದ್ದಾರೆ. ಸದರಿ ಆಸ್ತಿಯು ನಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದು ಪ್ರಧಾನ ಸಿವಿಲ್ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅ.ದಾ. ನಂ. 121/2013 ನೇದ್ದನ್ನು ಈ ದಾವಾದ ವಾದಿಯ ವಿರುದ್ಧ ದಾಖಲಿಸಿದ್ದೆವು ಎಂದರೆ ಸರಿ. ವಾಟ್ನಿ ಪತ್ರದಲ್ಲಿ 1997 ರಲ್ಲಿ ಆದಂತಹ ವಾಟ್ನಿಯಲ್ಲಿ ಸದರಿ ಆಸ್ತಿಯು ಸಾಮೂಹಿಕ ಮತ್ತು ಅವಿಭಕ್ತ ಕುಟುಂಬದ ಆಸ್ತಿ ಇತ್ತು ಎಂದು ನಮೂದಿಸಿಲ್ಲ. 1962 ರಲ್ಲಿ ನಮ್ಮ ತಂದೆ ಮತ್ತು ವಾದಿಯ ತಂದೆಯವರು ಬೇರೆ ಆಗಿದ್ದರಿಂದ ಈ ಆಸ್ತಿಯನ್ನು ವಾಟ್ನಿ ಪತ್ರದಲ್ಲಿ ನಮೂದಿಸಿಲ್ಲ ನಮ್ಮ ತಂದೆ ಮೃತಪಟ್ಟನಂತರ ನಾನು ಮತ್ತು ನನ್ನ ತಂಗಿ ವಾರಸಾನಾತೆಯಿಂದ ದಾವಾದ ಆಸ್ತಿಯನ್ನು ಮ್ಯುಟೇಷನ್ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ಆ ಸಮಯದಲ್ಲಿ ನಾವು ವಾದಿಯರ ಸಹಿಯನ್ನು ಪಡೆದಿಲ್ಲ. ವಾದಿಯ ತಂದೆಯವರು ಖರೀದಿಸಿದ ಆಸ್ತಿಗಳಿಗೆ ವಾದಿಯರಿಗೆ ಮಾತ್ರ ಪಾಲು ಇದೆ



ಎಂದರೆ ಸರಿಯಲ್ಲ. ನಮಗೆ ಆ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯ ಅಣ್ಣನವರು ನಾನು ಹೇಳಿದಂತೆ ಕೇಳುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವಾದಲ್ಲಿ ನಾನು ಮತ್ತು 2 ನೇ ಪ್ರತಿವಾದಿ ಸೇರಿ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. 1997 ರಲ್ಲಿ ಆದ ವಾಟ್ನಿಯಂತೆ ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ವಹಿವಾಟು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖೊಟ್ಟಿ ದಾಖಲೆಗಳ ಆಧಾರದ ಮೇರೆಗೆ ವಾದಿಗೆ ಸಂಬಂಧಿಸಿದ ಆಸ್ತಿಗಳ ಮೇಲೆ ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ. 1962 ಕ್ಕಿಂತ

ಪೂರ್ವದಲ್ಲಿ ನಮ್ಮ ತಂದೆ ಮತ್ತು ವಾದಿಯ ತಂದೆಯವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸಲು ನಾನು ಯಾವುದೇ ಸಾಕ್ಷಿಗಳನ್ನು ಮಾಡಿಸುವುದಿಲ್ಲ. 1997 ರಲ್ಲಿ ವಾಟ್ನಿ ಬರೆದವರನ್ನು ಮತ್ತು ಸಾಕ್ಷಿದಾರರನ್ನು ಸಾಕ್ಷಿ ಮಾಡಿಸುತ್ತೇನೆ.

**(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**